






# ಹೊಲ್ಲಾಂಗ್ ಮರಗಳಲ್ಲಿ ಗಿಬ್ಬನ್ ಹೆಜ್ಜೆಗುರುತು

**ಅಸ್ಸಾಂನಲ್ಲಿರುವ ಹೊಲ್ಲಾಂಗ್ ಪಾರ್ ಗಿಬ್ಬನ್ ವನ್ಯಧಾಮದ ಭೇಟಿ ಒಂದು ಅಪರೂಪದ ಅನುಭವ. ಬಾಲವಿಲ್ಲದ, ಹೆಚ್ಚಿನ ಬುದ್ಧಿಶಕ್ತಿ ಇರುವ ಗಿಬ್ಬನ್‌ಗಳು ನೆಲಕ್ಕೆ ಕಾಲಿಡುವುದಿಲ್ಲ! ದಕ್ಷಿಣ ಭಾರತದಲ್ಲಿ ಇವುಗಳ ಅಸ್ತಿತ್ವ ಇಲ್ಲವಾದ್ದರಿಂದ ಇವುಗಳಿಗೆ ದಕ್ಷಿಣ ಭಾರತದ ಭಾಷೆಗಳಲ್ಲಿ ಯಾವ ಹೆಸರೂ ಇಲ್ಲ.**

■ ಚಿತ್ರ– ಲೇಖನ: **ಮಲ್ಲಿಕಾರ್ಜುನ ಎಂ.**

ಅಸ್ಸಾಂಗೆ ಹೊರಟಿದ್ದೆವು. ಬೆಳಿಗ್ಗೆ ವಿಮಾನ ನಿಲ್ದಾಣದಲ್ಲಿ ವೈದ್ಯರಾದ ಮಹೇಶ್ ಜತೆಗೆ ಕುಳಿತಿರಬೇಕಾದರೆ ಅಸ್ಸಾಂನ ತಿನ್ಸುಕಿಯಾ ಜಿಲ್ಲೆಯಲ್ಲಿ ಸೈನಿಕರ ನರಮೇಧದ ವಿಷಯವನ್ನು ಪತ್ರಿಕೆಯಲ್ಲಿ ಓದಿ ಒಂದು ಕ್ಷಣ ಆತಂಕವಾಯಿತು. ತಕ್ಷಣ ಗೂಗಲ್ ಮ್ಯಾಪಿನಲ್ಲಿ ತಿನ್ಸುಕಿಯಾ ಜಿಲ್ಲೆಯನ್ನು ಹುಡುಕಾಡಿದೆವು. ನರಮೇಧ ನಡೆದ ಜಾಗ ಅರುಣಾಚಲ ಪ್ರದೇಶದ ಗಡಿಯಲ್ಲಿದ್ದು ನಾವು ಹೋಗುವ ಸ್ಥಳಗಳಿಂದ ತುಂಬಾ ದೂರವಿತ್ತು ಎನ್ನುವುದು ತಿಳಿದು ಸ್ವಲ್ಪ ಸಮಾಧಾನವಾಯಿತು. ಸೈನಿಕರ ಸಾವಿನ ಬಗ್ಗೆ ಬೇಸರ ಪಟ್ಟುಕೊಳ್ಳುತ್ತಲೇ ಗುವಾಹಟಿಯ ವಿಮಾನ ಏರಿದೆವು.

ಬೆಳಿಗ್ಗೆ ಹನ್ನೊಂದು ಗಂಟೆಗೆ ಗುವಾಹಟಿಯಿಂದ ಹೊರಟು, ಜೋರ್ಹಟ್ ತಲುಪುವ ಹೊತ್ತಿಗೆ ರಾತ್ರಿ ಏಳೂವರೆಯಾಗಿತ್ತು. ಭಾರತದ ಪೂರ್ವಭಾಗವಾದ್ದರಿಂದ ಸಂಜೆ ನಾಲ್ಕೂವರೆ ಗಂಟೆಗೆ ಕತ್ತಲಾಗುತ್ತಿದ್ದುದು ನಮಗೆ ಹೊಸ ಅನುಭವ. ಸುಮಾರು ಎಂಟು ಮೂವತ್ತಕ್ಕೆ ಹೊಲ್ಲಾಂಗ್ ಪಾರ್ ವನ್ಯಧಾಮದ ಹತ್ತಿರದ ಮಾರಿಯಾನಿ ಹಳ್ಳಿಯಲ್ಲಿ ಇದ್ದ ಗಿಬ್ಬನ್ ರೆಸಾರ್ಟ್ ತಲುಪುವಷ್ಟರಲ್ಲಿ, ಮಂಜು ಮುಸುಕಿ ಅಸ್ಸಾಂನ ವಿಶಿಷ್ಟ ಹವಾಮಾನದ ಪರಿಚಯವಾಗಲು ಶುರುವಾಗಿತ್ತು.

ನನ್ನ ಕಾಲೇಜಿನ ದಿನಗಳಲ್ಲಿ ಪರಿಸರ ತಜ್ಞರಾದ ಕಾರ್ತಿಕೇಯನ್ ಅವರ ಒಂದು ಉಪನ್ಯಾಸದಲ್ಲಿ ಪಾಲ್ಗೊಂಡಿದ್ದೆ. ಭಾರತದಲ್ಲಿ ಕಾಣಸಿಗುವ ಹೂಲ್ಲಾಕ್ ಗಿಬ್ಬನ್ ವಾನರಗಳ ಬಗ್ಗೆ ಅವರು ಸಂಕ್ಷಿಪ್ತವಾಗಿ ತಿಳಿಸಿ, ಅವುಗಳ ಆವಾಸ ಸ್ಥಾನವಾಗಿರುವ ಅಸ್ಸಾಂನ ನಿತ್ಯ ಹರಿದ್ವರ್ಣ ಕಾಡುಗಳ ಬಗ್ಗೆ ವಿವರಿಸಿದ್ದರು. ಉಪನ್ಯಾಸ ಕೇಳಿದಾಗಿನಿಂದ ಅಸ್ಸಾಂ ಕಾಡು ಮತ್ತು ಗಿಬ್ಬನ್